# ಕರ್ಮವೊಂದು ಆಧ್ಯಾತ್ಮಿಕ ಸಾಧನೆ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಪ್ರಾಣ** ಅಥವಾ ಜೀವಶಕ್ತಿಯು ಸದಾ ಸಂಸ್ಕಾರಗಳನ್ನು ಜಾಗೃತಗೊಳಿಸುತ್ತಿರುವ ಪರಿಣಾಮವಾಗಿ ಆಸೆಗಳು ಹಾಗೂ ನೆನಪುಗಳು ಸದಾ ಮನಸ್ಸಿನಲ್ಲಿ ಮೂಡುತ್ತಿರುತ್ತವೆ. ಆದರೆ ನಮ್ಮ ಗಮನಕ್ಕೆ ಕೇವಲ ಕೆಲವೇ ಬರುತ್ತವೆ. ಕೇವಲ ಆಸೆಗಳೇ ತೊಂದರೆಯನ್ನೊಡ್ಡುವುದಿಲ್ಲ. ಇಚ್ಛಾಶಕ್ತಿಯು ಅವುಗಳೊಡನೆ ಬೆಸೆದಾಗಲೆ ಅವು ನಮ್ಮವಾಗುವುದು. ಆಗಲೇ ಅವು ಸಂಕಲ್ಪಗಳಾಗುತ್ತವೆ. ಹೀಗೆ ಆಸೆಗಳು ಆತ್ಮದೊಡನೆ ಸಂಬಂಧವನ್ನು ಪಡೆದಾಗ ಅವು ಚೈತನ್ಯದಿಂದ ಕೂಡಿ ಜೀವ ಪಡೆದು ನಮಗೆ ತೊಂದರೆ ಕೊಡಲು ಪ್ರಾರಂಭಿಸುತ್ತವೆ. ಆದರೆ ಅನಾಸಕ್ತಿಯ ಮೂಲಕ ಇಚ್ಛಾಶಕ್ತಿಯನ್ನು ಬೇರ್ಪಡಿಸಿದರೆ, ಆಸೆಗಳು ಶಕ್ತಿ ಗುಂದಿ ನಿರ್ಜೀವವಾಗಿ, ಕೆಲವು ಕಾಲ ಚೈತನ್ಯದ ವಲಯದಲ್ಲಿ ಸುಳಿದಾಡಿ ನಂತರ ಅದೃಶ್ಯವಾಗುವುವು. ದೀಪಾವಳಿಯಂದು ರಾತ್ರಿ ಮನೆಯ ಮಾಳಿಗೆಯ ಮೇಲೆ ನಿಂತು ನೋಡಿದರೆ, ನೂರಾರು ರಾಕೆಟ್‌ಗಳು, ಪಟಾಕಿಗಳು, ಬಿರುಸು ಬಾಣಗಳು ನಿಮ್ಮ ಸುತ್ತಲೂ ಸ್ಫೋಟಗೊಳ್ಳುತ್ತಿರುವುದನ್ನು ನೋಡುವಿರಿ. ಆದರೆ ನೀವು ನಿರ್ಲಿಪ್ತರಾಗಿರುತ್ತೀರಿ. ಅದೇ ರೀತಿ, ನಿರ್ಲಿಪ್ತ ವ್ಯಕ್ತಿ ಯಲ್ಲಿ ಆಸೆಗಳು ತೊಂದರೆ ನೀಡದೆ ಸುಳಿದು ಕಣ್ಮರೆಯಾಗುತ್ತಿರುತ್ತವೆ. ಅನಾಸಕ್ತಿಯೆಂದರೆ ಆಸೆಗಳಿಂದ ಮುಕ್ತಿ. ಪ್ರಾರಂಭದಲ್ಲಿ ಆಸೆಗಳನ್ನು ನಾಶಗೊಳಿಸಲಾಗುವುದಿಲ್ಲ. ಏಕೆಂದರೆ ಆಸೆಗಳ ಬೀಜರೂಪ(ಕರ್ಮಾಶಯ)ವನ್ನು ಕೇವಲ ಆಧ್ಯಾತ್ಮಿಕ ಅನುಭವಾಗ್ನಿಯಿಂದ ಮಾತ್ರವೇ ನಾಶಗೊಳಿಸಬಹುದು. ಆದರೆ ಆಧ್ಯಾತ್ಮಿಕ ಸಾಧನೆಯ ಪ್ರಾರಂಭಿಕರು ಆಸೆಗಳು ಕ್ರಿಯೆಯಲ್ಲಿ ಪರ್ಯವಸಾನವಾಗದಂತೆ ನೋಡಿಕೊಂಡರೆ ಸಾಕು ಹಾಗೂ ಅವನ್ನು ಅವ್ಯಕ್ತ, ಸೂಕ್ಷ್ಮಸ್ಥಿತಿಗೆ ರೂಪಾಂತರಗೊಳಿಸಬೇಕು. ಆಸೆಗಳು ಮೂಡಿದರೆ ಇಚ್ಛಾಶಕ್ತಿಯಿಂದ ಅವನ್ನು ಬೇರ್ಪಡಿಸಬೇಕು. ಇದೇ ಸಾಧಕನು ಗಳಿಸಬೇಕಾದ ಮೊದಲ ಸ್ವಾತಂತ್ರ್ಯ ಮತ್ತು ಇದೇ ಕರ್ಮಯೋಗದ ಆದ್ಯ ಗುರಿ. ಇಚ್ಛಾಶಕ್ತಿಯನ್ನು ಆಸೆಗಳಿಂದ ಮುಕ್ತಗೊಳಿಸಿದಾಗ, ದೇವರಿಗಾಗಿ ಇರುವ ವ್ಯಾಕುಲತೆಯು ಅದನ್ನು ಆಂತರಿಕಗೊಳಿಸುವುದು. ಆಸೆಗಳಿಂದ ಮುಕ್ತವಾದ ಇಚ್ಛಾಶಕ್ತಿಯ ಈ ಆಂತರಿಕ ಪ್ರವೃತ್ತಿಯನ್ನೇ ಸುರೇಶ್ವರಾಚಾರ್ಯರು ಪ್ರತ್ಯಕ್ ಪ್ರವಣತಾ (ಮನಸ್ಸಿನ ಅಂತರ್ಮುಖತ್ವ) ಎಂದು ಕರೆಯುತ್ತಾರೆ (ನೈಷ್ಕರ್ಮ್ಯಸಿದ್ಧಿ, ೧.೪೯). ಇದೇ ಕರ್ಮಯೋಗದ ಆದ್ಯ ಗುರಿಯೆಂದು ವೇದಾಂತದ ಆಚಾರ್ಯರೆಲ್ಲರೂ ಒಪ್ಪುತ್ತಾರೆ. ಮೋಡಗಳು ಹೇಗೆ ಮಳೆಗರೆದು ಅದೃಶ್ಯವಾಗುವವೋ ಹಾಗೆಯೇ ಕರ್ಮಗಳು ಪ್ರತ್ಯಕ್ ಪ್ರವಣತೆಯನ್ನುಂಟುಮಾಡಿ ಅದೃಶ್ಯವಾಗುವುವೆಂದು ಸುರೇಶ್ವರಾಚಾರ್ಯರು ಹೇಳುತ್ತಾರೆ. ಈ ಪ್ರಥಮ ಸ್ವಾತಂತ್ರ್ಯವನ್ನು ಪಡೆಯದೆ ಉನ್ನತ ಶ್ರೇಣಿಯ ಸ್ವಾತಂತ್ರ್ಯಗಳನ್ನು ಪಡೆಯಲಾಗುವುದಿಲ್ಲ.

> ಮೋಡಗಳು ಹೇಗೆ ಮಳೆಗರೆದು ಅದೃಶ್ಯವಾಗುವವೋ ಹಾಗೆಯೇ ಕರ್ಮಗಳು ಪ್ರತ್ಯಕ್ ಪ್ರವಣತೆಯನ್ನುಂಟು ಮಾಡಿ ಅದೃಶ್ಯವಾಗುವುವು.
>
> — ಸುರೇಶ್ವರಾಚಾರ್ಯ

## ಕರ್ಮ ಮತ್ತು ಪ್ರೀತಿ

ಆಸೆಗಳಿಂದ ಇಚ್ಛಾಶಕ್ತಿಯನ್ನು ಬೇರ್ಪಡಿಸುವ ಹಾಗೂ ಅಂತರ್ಮುಖವಾಗುವ ಈ ಸ್ವಾತಂತ್ರ್ಯವನ್ನು ಕರ್ಮಯೋಗಿಯು ತನ್ನ ಕರ್ಮಗಳನ್ನು ನಿರ್ದೋಷಗೊಳಿಸಲು ಹಾಗೂ ಇತರರಿಗೆ ಸೇವೆ ಸಲ್ಲಿಸಲು ಉಪಯೋಗಿಸುತ್ತಾನೆ. ಕರ್ಮಯೋಗಿಯ ವಿಷಯದಲ್ಲಿ ಆಂತರಿಕ ಶಕ್ತಿಯನ್ನು ಜಗದ್ಧಿತಕ್ಕಾಗಿ ಉಪಯೋಗಿಸುವುದೇ ಮನಸ್ಸನ್ನು ಅಂತರ್ಮುಖಗೊಳಿಸುವುದರ ಉದ್ದೇಶ. ಆದ್ದರಿಂದ ಆತನ ವಿಷಯದಲ್ಲಿ ಆಧ್ಯಾತ್ಮಿಕ ಪ್ರಯತ್ನವು ಎರಡು ದಿಕ್ಕಿನಲ್ಲಿ ಹರಿಯುವುದು : ಒಂದು, ಆಂತರಿಕವಾಗಿ ಮಾನಸಿಕ ಶಕ್ತಿಯನ್ನು ಆಳವೂ, ಏಕಮುಖವೂ ಆಗಿ ಮಾಡುವುದು ಮತ್ತು ಎರಡು, ಬಾಹ್ಯವಾಗಿ ಈ ಶಕ್ತಿಯನ್ನು ಸಮಾಜಸೇವೆಗೆ ವಿಸ್ತರಿಸುವುದು ಹಾಗೂ ಅದರಲ್ಲಿ ತೊಡಗಿಸುವುದು. ಈ ಉಭಯ ಚಲನೆಗಳ ವೈಶಿಷ್ಟ್ಯವೇ ಕರ್ಮಯೋಗವನ್ನು ಉಳಿದೆಲ್ಲ ಯೋಗಗಳಿಂದ ಭಿನ್ನಗೊಳಿಸುತ್ತದೆ.

ಕರ್ಮಯೋಗಿಯನ್ನು ಹೊರಮುಖಗೊಳಿಸುವ ಹಾಗೂ ಇತರರ ಹೊಣೆಯನ್ನು ಹೊರುವಂತೆ ಪ್ರೇರೇಪಿಸುವ ಈ ಶಕ್ತಿ ಯಾವುದು? ಇದು ಪ್ರೀತಿಯ ಶಕ್ತಿ—ಸ್ವಾರ್ಥ ಪ್ರೀತಿಯಲ್ಲ, ಏನನ್ನೂ ಬಯಸದ ನಿಸ್ವಾರ್ಥ ಪ್ರೀತಿ. ಪ್ರೀತಿ ಕರ್ಮಯೋಗದಿಂದ ಬೇರ್ಪಡಿಸಲಾಗದ ಒಂದು ಅಂಶ.

ಸಾಮಾನ್ಯವಾಗಿ ಮಾನವ ಪ್ರೀತಿಯು ಭಾವೋದ್ರೇಕವೆಂದು ಬಗೆದು ಅದು ಆಧ್ಯಾತ್ಮಿಕ ಪ್ರಗತಿಗೆ ಆತಂಕವೆನ್ನುತ್ತಾರೆ. ಈ ತಪ್ಪು ತಿಳುವಳಿಕೆಗೆ ಕಾರಣ ಅದನ್ನು ಆಸೆ ಹಾಗೂ ಸಹಜ

ಪ್ರವೃತ್ತಿಗಳೊಡನೆ ಸಮೀಕರಿಸುವುದು. ನಿಜವಾದ ಪ್ರೀತಿಯು ಭಾವೋದ್ರೇಕವಾಗಲೀ, ಆಸೆಯಾಗಲೀ ಅಲ್ಲ. ಅಸ್ತಿತ್ವದ ಮೂಲವೇ ಆದ ಇದು ಒಂದು ಅಲೌಕಿಕ ಏಕೀಕರಿಸುವ ಶಕ್ತಿ. ಇದನ್ನು ಜೀವನದಿಂದ ಬೇರ್ಪಡಿಸಲಾಗುವುದಿಲ್ಲ. ಸೃಷ್ಟಿಯಲ್ಲೆಲ್ಲ ಲಯಬದ್ಧವಾಗಿ ಮಿಡಿಯುತ್ತಿರುವ ಒಂದು ಮೂಲ ಸಾಮರಸ್ಯವಿದು. ಅದರ ಅಭಿವ್ಯಕ್ತಿಯು ಅನಂತ. ಅದು ವೈಯಕ್ತಿಕವಲ್ಲ. ನೀವು ಅದನ್ನು ಸೃಷ್ಟಿಸಲಾರಿರಿ. ಅದೇ ನಿಮ್ಮನ್ನು ಸೃಷ್ಟಿಸುತ್ತದೆ. ಪ್ರೀತಿಯನ್ನು ಯಾರೂ ಉತ್ಪತ್ತಿ ಮಾಡಲಾಗದು. ಪ್ರೀತಿಯನ್ನು ವ್ಯಕ್ತಿಯು ವಿಶೇಷವಾಗಿ ಸೃಷ್ಟಿಸುವುದು ಅಥವಾ ಹೊಸದಾಗಿ ಪಡೆಯುವುದು ಎಂಬುದು ಒಂದು ತಪ್ಪು ತಿಳುವಳಿಕೆ. ಇದು ಎಲ್ಲ ಜೀವಿಗಳಲ್ಲೂ ಸಹಜವಾಗಿ ಬುದ್ಬುದವಾಗುವ ಒಂದು ವಿಶ್ವಶಕ್ತಿ. ಅನೇಕ ಮಂದಿ ಸಹಜವಾಗಿ ತಮ್ಮಲ್ಲಿ ಮೂಡುವ ಈ ಪ್ರೀತಿಯನ್ನು ಸರಿಯಾಗಿ ನಿರ್ವಹಿಸುವಷ್ಟು ಪ್ರೌಢರಾಗದಿರುವುದೇ ಪ್ರೀತಿಯ ಅಪಜಯಗಳಿಗೆ ಮುಖ್ಯಕಾರಣ.

**ಎಲ್ಲ ಜೀವನವು ಒಂದೇ, ಮತ್ತು ಪ್ರೀತಿಯೆಂಬುದು ಈ ಜೀವನವನ್ನು ಒಗ್ಗೂಡಿಸುವ ಅಭಿವ್ಯಕ್ತಿ ಹಾಗೂ ಸೃಷ್ಟಿಯ ಮೂಲ ಐಕಮತ್ಯ.**

ಕ್ರೈಸ್ತ ಧರ್ಮಗ್ರಂಥಗಳು ಮಾನವ ಪ್ರೀತಿಯ ಬಗ್ಗೆ ದಿಟ್ಟತನದಿಂದ ಹಾಗೂ ಶಕ್ತಿಯುತವಾಗಿ ಉಲ್ಲೇಖಿಸಿವೆ. ಆದರೆ ಹಿಂದೂ ಧರ್ಮಗ್ರಂಥಗಳು ಅದರ ಬಗ್ಗೆ ಹೆಚ್ಚು ಘಂಟಾಘೋಷವಾಗಿ ಹೇಳುವುದಿಲ್ಲ. ಆದ್ದರಿಂದ ಹಿಂದೂಧರ್ಮವು ಕೇವಲ ಒಂದು ಒಣ ಬೌದ್ಧಿಕ ಚರ್ಚೆ ಹಾಗೂ ಶುದ್ಧಾಂಗವಾದ ಅಹಂಕಾರ ಪ್ರದರ್ಶನ ಎಂಬ ನಿಂದನೆಗೆ ಒಳಗಾಗಿದೆ. ಸತ್ಯವೇನೆಂದರೆ ಹಿಂದೂಧರ್ಮದಲ್ಲಿ "ಪ್ರೀತಿ"ಯನ್ನು ಅಸ್ತಿತ್ವದ ಒಗ್ಗೂಡಿಸುವ ಶಕ್ತಿಯೊಡನೆ (unifying power of Existence) ಸಮೀಕರಿಸುತ್ತಾರೆ. ಮನುಷ್ಯನನ್ನು ಮನುಷ್ಯನೊಡನೆ ಅಥವಾ ಮನುಷ್ಯನನ್ನು ದೇವರೊಡನೆ ಒಂದಾಗಿಸುವುದೆಲ್ಲವೂ ಪ್ರೀತಿಯೇ. ಹಿಂದೂ ಭಕ್ತನು ದೇವರಿಗೆ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳುವುದಿಲ್ಲ, ಬದಲಾಗಿ ಅವನಲ್ಲಿ ಒಂದಾಗಲು ಬಯಸುತ್ತಾನೆ. ಪ್ರೀತಿಯು ಸತ್ಯದ ಒಂದು ಅವಿಭಾಜ್ಯ ಅಂಗ, ಆದರೆ ಆತ್ಯಂತಿಕ ಸತ್ಯದಲ್ಲಿ ಪ್ರೀತಿಯ ಸ್ಥಾನವೇನು ಎಂಬುದು ಹಿಂದೂ ತತ್ತ್ವಜ್ಞಾನಿಗಳ ಚರ್ಚಾಸ್ಪದ ವಿಷಯವಾಗಿದೆ. ಶ್ರೀಶಂಕರರು "ಜ್ಞಾನ"ದ ಪವಿತ್ರತೆಯನ್ನು ಸಂರಕ್ಷಿಸಲು ಅದನ್ನು ಕರ್ಮದ ಪರಿಧಿಯೊಳಗೆ ಸೇರಿಸುತ್ತಾರೆ. ಶ್ರೀರಾಮಾನುಜರು ಪ್ರೀತಿಯನ್ನು ಒಂದು ವಿಶೇಷ ರೀತಿಯ ಜ್ಞಾನವೆನ್ನುತ್ತಾರೆ. ಸ್ವಾಮಿ ವಿವೇಕಾನಂದರು ಪ್ರೀತಿಯನ್ನು ಆನಂದ, ಪರಮಸುಖ ಎಂದು ಪರಿಗಣಿಸುತ್ತಾರೆ. ದೇವರು ತನ್ನ ಸತ್ತ್ವವನ್ನು ತಾನೇ ಪ್ರಕ್ಷೇಪಿಸುವುದೇ (self-projection) ಸೃಷ್ಟಿ ಎಂದು ನಂಬುವ ಬಂಗಾಳದ ವೈಷ್ಣವ ಪಂಥದವರು "ಪ್ರೀತಿ" ಎಂದರೆ ಭಗವಂತನು ತನ್ನ ಆನಂದವನ್ನು ತಾನೇ ಅನುಭವಿಸುವುದು ಎನ್ನುತ್ತಾರೆ. ಕರ್ಮಯೋಗಿಯ ದೃಷ್ಟಿಯಲ್ಲಿ ಪ್ರೀತಿಯು ಸತ್ ಅಥವಾ ಅಸ್ತಿತ್ವದ ಅಭಿವ್ಯಕ್ತಿಯಾಗಿ ಹೆಚ್ಚು ಅರ್ಥಪೂರ್ಣವಾಗುತ್ತದೆ. ಎಲ್ಲ ಜೀವನವು ಒಂದೇ, ಮತ್ತು ಪ್ರೀತಿಯೆಂಬುದು ಈ ಜೀವನವನ್ನು ಒಗ್ಗೂಡಿಸುವ ಅಭಿವ್ಯಕ್ತಿ ಹಾಗೂ ಸೃಷ್ಟಿಯ ಮೂಲ ಐಕಮತ್ಯ.

ಕರ್ಮಯೋಗವು ವ್ಯಕ್ತಿಯ ಕ್ರಿಯೆಗಳನ್ನು ವಿಶ್ವ ಪ್ರೇಮದೊಡನೆ ಸಾಮರಸ್ಯಗೊಳಿಸುವುದು. ಕರ್ಮಯೋಗಿ ಹಾಗೂ ಕಾರ್ಯನಿರತ ಪ್ರಾಪಂಚಿಕ ವ್ಯಕ್ತಿ—ಇವರ ನಡುವಿನ ವ್ಯತ್ಯಾಸವು ಪ್ರೀತಿಯನ್ನು ನಿರ್ವಹಿಸುವ ಕೌಶಲ್ಯದಲ್ಲಿದೆ. ಮೊದಲನೆಯದಾಗಿ ಪ್ರಾಪಂಚಿಕ ವ್ಯಕ್ತಿಯಲ್ಲಿ ಸ್ವಲ್ಪವೇ ಪ್ರೀತಿಯಿರುತ್ತದೆ. ಏಕೆಂದರೆ ಆತನಲ್ಲಿ ಇರುವ ದ್ವೇಷ, ಅಸೂಯೆ, ಲೋಭ ಮುಂತಾದ ನಿಷೇಧಾತ್ಮಕ ಭಾವಗಳು ಅವನಲ್ಲಿ ವಿಶ್ವಪ್ರೇಮದ ಪ್ರವಾಹಕ್ಕೆ ತಡೆಯೊಡ್ಡುತ್ತವೆ. ಕರ್ಮಯೋಗಿಯಲ್ಲಿ ಪ್ರೀತಿಯು ನದಿಯಂತೆ ಹರಿಯುವುದು. ಎರಡನೆಯದಾಗಿ, ಪ್ರಾಪಂಚಿಕ ವ್ಯಕ್ತಿಯು ತನ್ನಲ್ಲಿರುವ ಆ ಅತ್ಯಲ್ಪ ಪ್ರೀತಿಯು ಹರಿದು ಬೇರೆಯವರನ್ನು ತಲುಪಲು ಅಡ್ಡಿಗಳನ್ನು ಒಡ್ಡುವುದರ ಮುಖಾಂತರ ತನ್ನನ್ನೇ ತಾನು ಒಂದು ಸುಳಿ ಅಥವಾ ರೊಚ್ಚುಗುಂಡಿಯೊಳಗೆ ಸಿಲುಕಿಸಿಕೊಂಡುಬಿಡುವನು. ಪರಿಣಾಮವಾಗಿ, ಪ್ರೀತಿಯು ಆತನಿಗೆ ಸಂಘರ್ಷಣೆಯನ್ನುಂಟುಮಾಡುವುದು ಹಾಗೂ ಚಿತ್ರಹಿಂಸೆ ಕೊಡುವುದು. ಮೂರನೆಯ ವ್ಯತ್ಯಾಸವೆಂದರೆ ಪ್ರಾಪಂಚಿಕ ವ್ಯಕ್ತಿಗೆ ಪ್ರೀತಿಯ ಶಕ್ತಿಯ ಬಗ್ಗೆ ಅರಿವಿಲ್ಲ. ಆತನ ಪ್ರೀತಿಯು ಹುಟ್ಟರಿವಿನಂತಿರುತ್ತದೆ ಮತ್ತು ವಿವೇಕರಹಿತವಾಗಿರುತ್ತದೆ, ಅದು ಬೇರೆಯವರ ಮನೋಭಾವನೆಗೆ ಅನುಗುಣವಾದ ಪ್ರತಿಕ್ರಿಯೆ.

**ಕರ್ಮಯೋಗದ ಮುಖ್ಯವಾದ ಲಕ್ಷಣಗಳು: ಕರ್ಮದ ಮೂಲಕ ಮನಸ್ಸಿನ ಅಂತರ್ಮುಖತ್ವ ಮತ್ತು ಪ್ರಪಂಚದ ಏಳಿಗೆಗಾಗಿ ನಿಃಸ್ವಾರ್ಥವಾಗಿ, ಪ್ರೌಢ ಅರಿವಿನಿಂದ ಪ್ರೀತಿಯ ಕ್ರಮಬದ್ಧ ಪ್ರವಾಹ.**

ಹೆಚ್ಚು ಕಡಿಮೆ ಆತ ಪ್ರೀತಿಯ ಅಸಹಾಯಕ ಬಲಿಪಶು. ಆದರೆ ನಿಜವಾದ ಕರ್ಮಯೋಗಿಗೆ ಪ್ರೀತಿಯ ಪ್ರಚಂಡ ಶಕ್ತಿಯ ಅರಿವಿರುತ್ತದೆ ಹಾಗೂ ಆತನು ಅದರ ಒಡೆಯ ಮತ್ತು ನಿಯಂತ್ರವಾಗಿರುತ್ತಾನೆ. ಪ್ರೀತಿಯು ಅವನಲ್ಲಿ ಕ್ರಮವಾಗಿ ಹಾಗೂ ಹೇರಳವಾಗಿ ಇತರರೆಡೆಗೆ ಹರಿಯುವುದು. ಆತನು ಇತರರನ್ನು ತನ್ನ ಬಂಧನದೊಳಗೆ ಸಿಲುಕಿಸದೆ ಸಹಾಯ ಹಾಗೂ ಮಾರ್ಗದರ್ಶನ ನೀಡುತ್ತಾ ಅವರವರ ದಾರಿಯಲ್ಲೇ ಆತ್ಯಂತಿಕ ಗುರಿಯನ್ನು ತಲುಪಲು ಸಹಕರಿಸುವನು.

ಒಟ್ಟಿನಲ್ಲಿ ಇವೆರಡು ಕರ್ಮಯೋಗದ ಮುಖ್ಯವಾದ ಲಕ್ಷಣಗಳು: ಕರ್ಮದ ಮೂಲಕ ಮನಸ್ಸಿನ ಅಂತರ್ಮುಖತ್ವ ಮತ್ತು ಪ್ರಪಂಚದ ಏಳಿಗೆಗಾಗಿ ನಿಃಸ್ವಾರ್ಥವಾಗಿ, ಪ್ರೌಢ ಅರಿವಿನಿಂದ ಪ್ರೀತಿಯ ಕ್ರಮಬದ್ಧ ಪ್ರವಾಹ.

ಕರ್ಮಯೋಗದ ಮೂಲನಿಯಮಗಳು

ಕರ್ಮಯೋಗವು ಒಂದು ಆಧ್ಯಾತ್ಮಿಕ ಸಾಧನೆ ಮತ್ತು ವಿಶ್ವಮಾನ್ಯತೆಯನ್ನು ಪಡೆದಿರುವ ಕೆಲವು ಶಾಶ್ವತ ನಿಯಮಗಳ ಮೇಲೆ ಆಧಾರಿತವಾಗಿದೆ. ಮೊದಲ ನಿಯಮವೇ ನಿಃಸ್ವಾರ್ಥಕರ್ಮದ ಸಹಜತೆ. ನಾವು ನಮ್ಮ ಕೆಲಸಗಳನ್ನು ಸ್ವತಂತ್ರ ಇಚ್ಛಾಶಕ್ತಿಯಿಂದ ಮಾಡುತ್ತಿರುವೆವೆಂದು ತಿಳಿದರೂ ಎಲ್ಲಾ ಕಾರ್ಯಗಳೂ ವಿಶ್ವ ಜೀವವಾಹಿನಿಯ ಒಂದು ಭಾಗ. ಆದ್ದರಿಂದಲೇ ಶ್ರೀಕೃಷ್ಣನು ಹೇಳುತ್ತಾನೆ: "ಯಾರೂ ಒಂದು ಕ್ಷಣವೂ ನಿಷ್ಕ್ರಿಯರಾಗಿ ಇರುವುದಿಲ್ಲ. ಪ್ರಕೃತಿಯ ಗುಣಗಳಿಂದ ಪ್ರೇರೇಪಿತರಾಗಿ ಎಲ್ಲರೂ ಅಸಹಾಯಕರಾಗಿ ಕಾರ್ಯದಲ್ಲಿ ತೊಡಗಿರುತ್ತಾರೆ" (ಭಗವದ್ಗೀತೆ, ೩.೫). ಹೇಗೆ ಭೌತಿಕ ಕೆಲಸದಲ್ಲಿ ಭೌತಿಕ ಶಕ್ತಿಯನ್ನು ಬಳಸಲಾಗುವುದೋ ಹಾಗೆಯೇ ಕರ್ಮದಲ್ಲಿ ಜೀವಶಕ್ತಿಯನ್ನು ಬಳಸಲಾಗುತ್ತದೆ. ಈ ಜೀವನದ ಚಲನವಲನಗಳೆಲ್ಲ ವಿಶ್ವದಲ್ಲಿ ನಡೆಯುತ್ತಿರುವ ಅನಂತ, ಅಲೌಕಿಕ ಚಲನೆಯ ಒಂದು ಭಾಗ.

ಗೆಲಿಲಿಯೊ ಹಾಗೂ ನ್ಯೂಟನ್‌ರ ಒಂದು ಮಹತ್ತ್ವವಾದ ಆವಿಷ್ಕಾರವೆಂದರೆ ಎಲ್ಲಿಯವರೆಗೆ ಹೊರಗಿನ ಒಂದು ಶಕ್ತಿಯು ತಡೆಯೊಡ್ಡುವುದಿಲ್ಲವೋ ಅಲ್ಲಿಯವರೆಗೆ ಎಲ್ಲ ವಸ್ತುಗಳೂ ಸ್ವಾಭಾವಿಕವಾಗಿಯೇ ನೇರವಾದ ರೇಖೆಯಲ್ಲಿ ಚಲಿಸುವುವು. ಇದು ಸುಪ್ರಸಿದ್ಧವಾದ ನ್ಯೂಟನ್‌ರ ಚಲನೆಯ ಪ್ರಥಮ ನಿಯಮ. ಹೀಗೆಂದರೆ ವಸ್ತುಗಳನ್ನು ಚಲಿಸುವಂತೆ ಮಾಡಲು ಯಾವ ಶಕ್ತಿಯ ಅಗತ್ಯವೂ ಇಲ್ಲ. ನಮ್ಮನ್ನು ಭೂಮಿಯ ಮೇಲೆ ಹಿಡಿದು ನಿಲ್ಲಿಸಲು ಗುರುತ್ವಾಕರ್ಷಣ ಶಕ್ತಿಯು ಇಲ್ಲದಿದ್ದರೆ ನಾವೆಲ್ಲರೂ ಆಕಾಶದಲ್ಲಿ ತೇಲುತ್ತಿದ್ದೆವು! ಎಲೆಕ್ಟ್ರಾನುಗಳಿಂದ ಹಿಡಿದು ಅತ್ಯುತ್ಕೃಷ್ಟವಾದ ಆಕಾಶಗಂಗೆಯವರೆಗೆ (super galaxy) ವಿಶ್ವದಲ್ಲಿ ಎಲ್ಲವೂ ಸದಾ ಚಲಿಸುತ್ತಿವೆ. ನಾವೇ ನಮ್ಮ ಕೈಕಾಲುಗಳನ್ನು ಚಲಿಸುತ್ತಿರುವೆವೆಂದು ಆಲೋಚಿಸಿದರೂ ವಾಸ್ತವಿಕವಾಗಿ ನಮ್ಮ ದೇಹದ ಜೀವಕೋಶಗಳಲ್ಲಿ ಅಂತರ್ನಿಹಿತ ಶಕ್ತಿಯಾಗಿ ಮಾರ್ಪಡಿಸಲ್ಪಟ್ಟ ಸೌರಶಕ್ತಿಯೇ ಕ್ರಿಯಾಶಕ್ತಿಯಾಗಿ ಮಾರ್ಪಡುತ್ತಿರುತ್ತದೆ. ನಮ್ಮ ಎಲ್ಲ ಚಲನೆಯೂ ಈ ಸೌರಶಕ್ತಿಯ ಪರಿವರ್ತನೆಯೇ. ನಾವು ಕೇವಲ ಈಗಾಗಲೇ ನಮ್ಮಲ್ಲಿ ಹಾಗೂ ಎಲ್ಲೆಡೆಯಲ್ಲೂ ಇರುವ ಈ ಶಕ್ತಿಯನ್ನು ನಿಯಂತ್ರಿಸಬಹುದು ಅಥವಾ ಅದರ ಚಲನೆಯ ಗತಿಯನ್ನು ಬದಲಾಯಿಸಬಹುದು ಅಷ್ಟೆ. ಹಾಗೆಯೇ ಆಲೋಚನೆಗಳನ್ನು ನಾವೇ ಉತ್ಪತ್ತಿಸುವುದಿಲ್ಲ. ಸುಪ್ತ ಸಂಸ್ಕಾರಗಳು ಪ್ರಾಣ ಅಥವಾ ಜೀವಶಕ್ತಿಯ ಚಲನೆಯಿಂದ ಆಲೋಚನೆಯ ರೂಪದಲ್ಲಿ ಹೊರಹೊಮ್ಮುವುವು. ಕೇವಲ ಆಲೋಚನೆಗಳನ್ನು ಕ್ರಮಬದ್ಧವಾಗಿ ಹರಿಯುವಂತೆ ಮಾಡುವುದೊಂದೇ ನಮಗೆ ಸಾಧ್ಯ. ಆತ್ಯಂತಿಕ ಮುಕ್ತಿಯಾಗದವರೆಗೂ ಮನಸ್ಸಿನ ಚಲನೆ ನಿಲ್ಲುವುದಿಲ್ಲ ಎಂಬುದು ಪತಂಜಲಿಯ ಹೇಳಿಕೆ. ಸುಷುಪ್ತಿ ಹಾಗೂ ಸಮಾಧಿಯಲ್ಲೂ ಕೂಡ ಮನಸ್ಸಿನಲ್ಲಿ ಸೂಕ್ಷ್ಮ ಪರಿವರ್ತನೆಗಳಾಗುತ್ತಿರುತ್ತವೆ. ಇವೆಲ್ಲವೂ, ಚಲನೆ ಎಂಬುದು ಅಸ್ಪಷ್ಟ ಹಾಗೂ ವಿಶ್ವವ್ಯಾಪಕ ಎಂಬುದನ್ನು ತಿಳಿಸುತ್ತದೆ.

> **ಯಾವ ಕರ್ಮವೂ ನಮ್ಮದಲ್ಲ, ನಿಃಸ್ವಾರ್ಥ ಕರ್ಮವೇ ಸಹಜ ನಿಯಮ.**

ನ್ಯೂಟನ್‌ನಿಗಿಂತ ಶತಮಾನಗಳ ಹಿಂದೆಯೇ ಅರಿಸ್ಟಾಟಲ್ ಎಲ್ಲ ಚಲನೆಗಳೂ ವಿಶ್ವಚಲನೆಯ ಒಂದು ಭಾಗವೆಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದನು. ಈ ವಿಶ್ವಚಲನೆಯು ಚಲನಾತ್ಮಕನಲ್ಲದ ಆದಿಚಾಲಕ(Prime Mover)ನಿಂದ ಪ್ರಾರಂಭವಾಗಿದೆ. ಎಲ್ಲ ಚಲನೆಗಳ ಮೂಲವಾದ ಭಗವಂತನ ದೇಹವೇ ಈ ಸೃಷ್ಟಿ ಎಂದು ವೇದಾಂತವೂ ಸಹ ಹೇಳುತ್ತದೆ. ಶ್ರೀಕೃಷ್ಣನು ಗೀತೆಯಲ್ಲಿ "ಹೇ ಅರ್ಜುನ, ಸರ್ವಪ್ರಾಣಿಗಳನ್ನೂ ಯಂತ್ರಾರೂಢವಾದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತ ಈಶ್ವರನು ಸರ್ವಜೀವಿಗಳ ಹೃದಯಪ್ರದೇಶದಲ್ಲಿ ನೆಲೆಸಿರುತ್ತಾನೆ" (ಗೀತೆ, ೧೮.೬೧) ಎಂದು ಹೇಳುತ್ತಾನೆ. ಅರ್ಜುನನಿಗೆ ಆ ಆದಿಚಾಲಕನಲ್ಲಿ ಶರಣಾಗಲು ಹೇಳುತ್ತಾನೆ. ಇಡೀ ವಿಶ್ವವೇ ಚಲಿಸುತ್ತಿದೆ. ಹೇಗೆ ನಮ್ಮ ದೇಹದೊಳಗೆ ಜೀವಕಣಗಳು ತಮಗಿತ್ತ ಕರ್ತವ್ಯವನ್ನು ಸತತವಾಗಿ ಮಾಡುತ್ತಾ ಮಾನವ ಜೀವನ ನಿರ್ವಹಣೆಗೆ ಸಹಕಾರಿಯಾಗಿರುವುವೋ ಹಾಗೆಯೇ ಎಲ್ಲ ಜೀವಿಗಳೂ ವಿಶ್ವದ ಅಂತ್ಯವಿಲ್ಲದ ಜೀವವಾಹಿನಿಯ ಪ್ರವಾಹಕ್ಕೆ ಸಹಕಾರಿಯಾಗಿ ಕೆಲಸ ಮಾಡುತ್ತಿರುವುವು. ಪ್ರತಿಯೊಂದು ಜೀವಿಗೂ ಈ ರಹಸ್ಯಾತ್ಮಕ ಅಸ್ತಿತ್ವದಲ್ಲಿ ಒಂದು ಪಾತ್ರವಿದ್ದಂತೆ ತೋರುವುದು. ಇದು ಏನನ್ನು ಪ್ರತಿಬಿಂಬಿಸುತ್ತದೆ? ಯಾವ ಕರ್ಮವೂ ನಮ್ಮದಲ್ಲವೆಂದೂ ನಿಃಸ್ವಾರ್ಥ ಕರ್ಮವೇ ಸಹಜ ನಿಯಮವೆಂದೂ ತೋರಿಸುತ್ತದೆ. ಅಹಂಕಾರವು ವಿಶ್ವಕರ್ಮದ ಒಂದು ಭಾಗವನ್ನು ತನಗೆ ಆರೋಪಿಸಿಕೊಂಡು ತನ್ನದೇ ಎಂದು ಕರೆಯುತ್ತದೆ. ವಾಸ್ತವವಾಗಿ ಪ್ರಕೃತಿಯ ನಿಃಸ್ವಾರ್ಥಕಾರ್ಯವೊಂದೇ "ಕ್ರಿಯೆ". ಅಹಂಕಾರದಿಂದ ಮಾಡಿದ ಕರ್ಮ ಒಂದು "ಪ್ರತಿಕ್ರಿಯೆ"—ವ್ಯಕ್ತಿತ್ವದಲ್ಲಿ ಹರಿಯುವ ಜೀವವಾಹಿನಿಗೆ ಅಹಂಕಾರದ ಪ್ರತಿಕ್ರಿಯೆ. ವಿಶ್ವವಾಹಿನಿಗೆ ಸಂಬಂಧಿಸಿದ ವಸ್ತುವನ್ನು ತನಗಾಗಿ ಉಳಿಸಿಕೊಳ್ಳುವ ಅಹಂಕಾರದ ಹತಾಶ ಯತ್ನ ಇದು. ಆದ್ದರಿಂದಲೇ ಆಸೆಯಿಂದ ಪ್ರೇರಿತವಾದ ಕಾರ್ಯಗಳು ದುಃಖ, ಹೋರಾಟ, ಹಾಗೂ ಉದ್ವೇಗಗಳನ್ನು ಉಂಟುಮಾಡುತ್ತವೆ. ಅಹಂಕಾರವೇ ನಮ್ಮೆಲ್ಲ ದುಃಖಕ್ಕೆ ಕಾರಣ. ನಾವು ಹೆಚ್ಚು ಅಹಂಕಾರಿಗಳಾದಷ್ಟು

ಜೀವವಾಹಿನಿಯ ಪ್ರವಾಹದಿಂದ ದೂರ ಸರಿಯುವೆವು ಹಾಗೂ ಜೀವನ ನಿರ್ವಹಣೆಗೆ ಹೆಚ್ಚು ಪ್ರಯತ್ನ ಬೇಕಾಗುವುದು.

ನಿಃಸ್ವಾರ್ಥ ಕಾರ್ಯವು ಸಹಜ, ಶಾಂತ, ಹಾಗೂ ನಿರಾಳ. ನಮ್ಮ ದೈನಂದಿನ ಕಾರ್ಯಗಳಿಗಾಗಿ ಹೆಚ್ಚು ಚಿಂತಿಸುವ ಅಗತ್ಯ ಇಲ್ಲ. ಪ್ರಕೃತಿಯೇ ನಮಗಾಗಿ ಎಲ್ಲವನ್ನೂ ಮಾಡುವುದು. ನಾವು ಮಾಡಬೇಕಾದುದೆಲ್ಲಾ, ಕೇವಲ ಪ್ರಕೃತಿಯು ಹೇಗೆ ಕೆಲಸ ಮಾಡುವು ದೆಂದು ಅರಿಯುವುದು. ಇದೇ ಶಿಕ್ಷಣ ಅಥವಾ ಕಲಿಯುವಿಕೆ. ಪ್ರಕೃತಿಯು ಸಹಜವಾಗಿ ಕೆಲಸ ಮಾಡಲು ಒಂದು ಕಾಲುವೆಯನ್ನು ನಿರ್ಮಾಣ ಮಾಡುವುದೇ ನಮ್ಮ ಕೆಲಸ. ಒಬ್ಬ ಹುಡುಗನು ಪರೀಕ್ಷೆಯಲ್ಲಿ ಹೇಗೆ ಉತ್ತರವನ್ನು ಬರೆಯುವನು? ಅವನು ಕೇವಲ ಲೇಖನಿಯನ್ನು ಹಿಡಿದುಕೊಳ್ಳುವನು. ಹಿಂದೆಯೇ ಸಂಗ್ರಹಿಸಿದ —ಅರಗಿಸಿಕೊಂಡ ಹಾಗೂ ಅರಗಿಸಿಕೊಳ್ಳಲಾಗದ— ಎಲ್ಲ ವಿಚಾರಗಳ ಉಗ್ರಾಣವಾಗಿರುವ ಅಪ್ರಜ್ಞೆಯು ಎಲ್ಲವನ್ನು ಮಿಶ್ರಣಮಾಡಿ ಲೇಖನಿಗೆ ಒದಗಿಸುತ್ತದೆ. ನಮ್ಮ ದೈನಂದಿನ ಹಾಗೂ ವ್ಯಾವಹಾರಿಕ ಕಾರ್ಯಗಳೆಲ್ಲವನ್ನೂ ಪ್ರಕೃತಿಯೇ ಅಪ್ರಜ್ಞೆಯ ಮೂಲಕ ಮಾಡುತ್ತಿರುವುದು. ನಾವು ಪ್ರಕೃತಿಯಲ್ಲಿ ನಂಬಿಕೆಯಿಟ್ಟು, ಅದರ ಕೆಲಸದೊಡನೆ ನಮ್ಮನ್ನು ಹೊಂದಿಸಿ ಕೊಂಡರೆ ಹೆಚ್ಚು ಪರಿಶ್ರಮ, ಹೋರಾಟಗಳಿಲ್ಲದೆ ಹೆಚ್ಚು ದಕ್ಷತೆ ಯಿಂದ ಕೆಲಸ ಮಾಡಬಲ್ಲೆವು. ಇದರಿಂದ ಗಳಿಸಿದ ಮನಶ್ಶಾಂತಿ ಹಾಗೂ ಸ್ವಾತಂತ್ರ್ಯವನ್ನು ದೇವರ ಅರಸುವಿಕೆಗೆ ಬಳಸಬಹುದು.

ಕರ್ಮಯೋಗದ ಎರಡನೆಯ ನಿಯಮವೇ ಯಜ್ಞ. ಇದು ಎರಡು ಅಂಶಗಳನ್ನು ಸೂಚಿಸುತ್ತದೆ: ಎಲ್ಲ ಜೀವಿಗಳೂ ದೇವರ ದೇಹದ ಭಾಗ ಹಾಗೂ ಜೀವಶಕ್ತಿಯು ಅದರಲ್ಲಿ ವೃತ್ತಾಕಾರದಲ್ಲಿ ಹರಿಯುತ್ತಿದೆ. ಎಲ್ಲ ಜೀವಿಗಳೂ ಆ ಸಮಷ್ಟಿವಾಹಿನಿಯಿಂದ ಪಡೆ ದುದನ್ನು ಅದಕ್ಕೇ ಹಿಂದಿರುಗಿಸಬೇಕು. ಉನ್ನತ ಮಟ್ಟದ ಆನಂದ ಅಥವಾ ಅನುಭವವನ್ನು ಗಳಿಸಲು ಕೆಳಗಿನ ಹಂತದ ಆನಂದ ಅಥವಾ ಅನುಭವವನ್ನು ತ್ಯಾಗ ಮಾಡಬೇಕು ಎಂಬ ಅಂಶವನ್ನು ಇದು ಸೂಚಿಸುತ್ತದೆ. ಆತ್ಯಂತಿಕ ಗುರಿಯನ್ನು ಮುಟ್ಟುವವರೆಗೂ ಈ ನಿಯಮವನ್ನು ಪಾಲಿಸಬೇಕು. ಕೇವಲ ಪೂರ್ಣ ಜ್ಞಾನೋದಯವಾದ ವ್ಯಕ್ತಿಗೆ ಮಾತ್ರವೇ ಈ ನಿಯಮದಿಂದ ಮುಕ್ತಿ. ಆತನೂ ಕೂಡ ಪ್ರಪಂಚದ ಉದ್ಧಾರಕ್ಕಾಗಿ ಸಮಾಜ ಸೇವೆ ಸಲ್ಲಿಸಲು ಈ ನಿಯಮವನ್ನು ಅನುಸರಿಸಬಹುದು.

ಕರ್ಮಯೋಗದ ಮೂರನೆಯ ಮೂಲ ನಿಯಮವೇ ಕರ್ಮ ಫಲವು ಕರ್ತೃವಿನ ಪ್ರಜ್ಞಾಸ್ಥಿತಿಯನ್ನು ಆಧರಿಸಿದೆ ಎಂಬುದು. ನಾವು ಏನು ಮಾಡುತ್ತಿರುವೆವು ಎಂಬುದು ಮುಖ್ಯವಲ್ಲ, ಹೇಗೆ ಮಾಡುತ್ತಿರುವೆವು ಎಂಬುದೇ ಮುಖ್ಯ. (ಈ ನಿಯಮವು ಕೇವಲ ಸ್ವಾಸ್ಥ್ಯ ಬುದ್ಧಿಯ ಸತ್ಕರ್ಮಗಳಿಗೆ ಮಾತ್ರ ಅನ್ವಯಿಸುವುದು.) ಕರ್ಮಶಕ್ತಿಯ ಅಂತಿಮ ಮೂಲ ದೇವರೇ ಆದ್ದರಿಂದ ಎಲ್ಲ ಕೆಲಸಗಳೂ ಪವಿತ್ರ ಹಾಗೂ ಆತ್ಮ ಸಾಕ್ಷಾತ್ಕಾರಕ್ಕೆ ಸಾಧನವಾಗಿ ಅವನ್ನು ಉಪಯೋಗಿಸಬಹುದು. ಆದರೆ ಇದಕ್ಕಾಗಿ ನಾವು ಸರಿಯಾದ ಪ್ರಜ್ಞಾಸ್ಥಿತಿಯಲ್ಲಿರಬೇಕು.

ನಮ್ಮನ್ನು ಪ್ರಪಂಚಕ್ಕೆ ಬಂಧಿಸುವುದು ಕರ್ಮವಲ್ಲ, ಕೇವಲ ಆಸೆಗಳು ಹಾಗೂ ಅಹಂಕಾರ. ಇದರ ಅರ್ಥ ಕೇವಲ ಯಾಂತ್ರಿಕ ವಾಗಿ ಅಥವಾ ಜೇನುಹುಳುವಿನಂತೆ ಕೆಲಸ ಮಾಡಬೇಕೆಂದು ಅಲ್ಲ. ಕರ್ಮವನ್ನು ಎಚ್ಚೆತ್ತ ಮನಸ್ಸಿನಿಂದ ಹಾಗೂ ಅರಿವಿನಿಂದ ಮಾಡಬೇಕು. ನಿಃಸ್ವಾರ್ಥ ಕರ್ಮವೆಂದರೆ ಕೇವಲ ಆಸೆಗಳಿಲ್ಲದೆ ಮಾಡುವ ಕೆಲಸವೆಂದೂ, ಅದರ ಹಿಂದೆ ಎಚ್ಚರದಿಂದ ಕೂಡಿದ ಅನಾಸಕ್ತಿ ಮತ್ತು ವಿಶಾಲ ದೃಷ್ಟಿಕೋನ ಇರಬೇಕು ಎಂಬುದನ್ನೂ ನೆನಪಿನಲ್ಲಿಡಬೇಕು. ಪ್ರತಿಯೊಂದು ಕಾರ್ಯದಿಂದಲೂ ನಮ್ಮ ಇಚ್ಛಾಶಕ್ತಿಯ ಬಿಡುಗಡೆಯಾಗ ಬೇಕು, ಹಾಗೂ ಅದು ನಮ್ಮ ಅರಿವನ್ನು ಹೆಚ್ಚಿಸಬೇಕು. ಜೀವಾತ್ಮನನ್ನು ಆಸೆಗಳಿಂದ ಮುಕ್ತಗೊಳಿಸಿದರೆ ಕರ್ಮವು ಸಂಸ್ಕಾರವನ್ನು ಉಂಟುಮಾಡುವುದಿಲ್ಲ. ಜೀವಾತ್ಮನನ್ನು ಜೀವನ ಪ್ರವಾಹದಿಂದ ಬೇರ್ಪಡಿಸಿದರೆ ಎಲ್ಲ ಕೆಲಸಗಳನ್ನೂ ಪ್ರಕೃತಿಯೇ ಮಾಡುವುದು ಹಾಗೂ ಅದರ ಫಲವೂ ಪ್ರಕೃತಿಗೇ ಸೇರಿ, ಕರ್ತೃವಿಗೆ ಹಿಂದಿರುಗುವುದಿಲ್ಲ. ಆದ್ದರಿಂದ, ನಮ್ಮನ್ನು ಬಂಧಿ ಸುವ ಸಾಮಾನ್ಯ ಕಾರ್ಯಗಳನ್ನು ಮುಕ್ತಿಯ ಸಾಧನವಾದ ಕರ್ಮಯೋಗವಾಗಿ ಪರಿವರ್ತಿಸಲು ವ್ಯಕ್ತಿಯ ಪ್ರಜ್ಞಾಸ್ಥಿತಿಯು ಬಹು ಮುಖ್ಯ. ಒಂದು ಪ್ರಸಿದ್ಧ ಹೇಳಿಕೆಯಂತೆ, "ಮನಸ್ಸೇ ಮನುಷ್ಯನ ಬಂಧನ ಹಾಗೂ ಮುಕ್ತಿಗೆ ಕಾರಣ" (ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ |— ಅಮೃತ ಬಿಂದು ಉಪನಿಷತ್, ೨). (ಮುಂದುವರಿಯುತ್ತದೆ.)

ಶ್ರೀರಾಮಕೃಷ್ಣರ ಶಿಷ್ಯರಾದ ಸ್ವಾಮಿ ಶಿವಾನಂದರು (ಮಹಾಪುರುಷ್ ಮಹಾರಾಜ್) ಕಾಶಿಯ ಅದ್ವೈತಾಶ್ರಮದ ಮುಖ್ಯಸ್ಥರಾಗಿದ್ದ ಸಮಯ. ಆಗ ಒಂದು ನಾಯಿ ಆಶ್ರಮದಲ್ಲಿ ಇತ್ತು. ಎಲ್ಲ ಸಾಧುಗಳಂತೆಯೇ ಅದಕ್ಕೂ ದಿನಕ್ಕೆ ನಾಲ್ಕು ಚಪಾತಿ ಸಿಗುತ್ತಿತ್ತು. ಒಮ್ಮೆ ಬ್ರಹ್ಮಚಾರಿಗಳೊಬ್ಬರು ಯಾವುದೊ ಕಾರಣಕ್ಕಾಗಿ ನಾಯಿಯನ್ನು ಹೊಡೆದರು. ಅದು ಕಾಲುನೋವಿನಿಂದ ನರಳತೊಡಗಿತು. ಅದಕ್ಕೆ ಸರಿಯಾಗಿ ನಡೆಯುವುದಕ್ಕೇ ಆಗುತ್ತಿರಲಿಲ್ಲ. ಮಹಾಪುರುಷ್ ಮಹಾರಾಜರು ಪ್ರೀತಿಯಿಂದ ಅದನ್ನು ಕರೆದರು. ಆದರೆ ಅದಕ್ಕೆ ಮೇಲೆ ಏಳುವುದಕ್ಕೇ ಸಾಧ್ಯವಾಗಲಿಲ್ಲ. ಅದರ ಸ್ಥಿತಿಯನ್ನು ನೋಡಿ ಮಹಾಪುರುಷ್ ಮಹಾರಾಜರಿಗೆ ಪರಿಸ್ಥಿತಿ ಅರ್ಥವಾಯಿತು. ಅವರು ಯಾರನ್ನೂ ಕರೆಯದೆ ತಾವೇ ಹೋಗಿ ನಾಯಿಯ ಶುಶ್ರೂಷೆ ಮಾಡಿದರು ಮತ್ತು ಅದಕ್ಕೆ ಉಣಬಡಿಸಿದರು. ಬೇರೆ ಯಾರಾದರೂ ಸಾಧುಗಳು ಮುಂದೆ ಬಂದರೆ ಮುನಿಸಿನಿಂದ ಹೇಳುತ್ತಿದ್ದರು : "ಇಲ್ಲ, ಇಲ್ಲ, ನಿಮಗೆ ದಯೆ ಅನುಕಂಪಗಳು ಇಲ್ಲವೇ ಇಲ್ಲ. ನೀವು ನಿಮ್ಮ ಆಧ್ಯಾತ್ಮಿಕ ಸಾಧನೆಯನ್ನು ಮಾಡಲು ಹೋಗಿ"